ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು
RAJIV GANDHI UNIVERSITY OF HEALTH SCIENCES, KARNATAKA, BENGALURU
4$^{th}$ T Block, Jayanagar, Bengaluru – 560 041

ಸಂಖ್ಯೆ. ಆರ್‌ಜಿಯು/ಪ್ರಾಧಿಕಾರ/ಸೆನೆಟ್&ಸಿಂಡಿಕೇಟ್/18/2022–23 ದಿನಾಂಕ. 16.05.2022

ದಿನಾಂಕ 11.05.2022ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್ ಹಾಗೂ 169ನೇ ಸಿಂಡಿಕೇಟ್ ಜಂಟಿ ಸಭೆಯ ನಡವಳಿಗಳು:

**Senate members present :**

| | |
|---|---|
| 1. | Dr. M.K.Ramesh, Vice-Chancellor, Rajiv Gandhi University of Health Sciences, Bangalore |
| 2. | Shri. U. B.Venkatesh, Member of Legislative Council, 2$^{nd}$ Cross, 3$^{rd}$ Main, 4$^{th}$ Phase, Dollors Layout, J.P.Nagar, Bengaluru-78 |
| 3. | Dr. Anand S.Kirishal, Sri Venkateshwara Hospital, Gandhinagar 2$^{nd}$ Cross, Bellari |
| 4. | Dr. Kamala R, Associate Professor, Department of Dentistry, Esicpgimsr Medical College, Rajajinagar, Bengaluru |
| 5. | Dr. Pramod K, Associate Professor, Department of Neurology, Bangalore Medical College, Bengaluru |
| 6. | Dr. Prakash Tarival, Professor & Head of Department, Department of Dravyaguna, S.V.M Ayurvedic Medical College, Ilkal |
| 7. | Prof. Sai Kumar, Principal, Sanjay Gandhi Institute of Trauma & Orthopaedics, College of Physiotherapy, Byrasandra, Jayanagar East, Bangalore- 560 011 |
| 8. | Dr. Prashanth C S, Prof. Dept. of Orthodontics and Dental Facial Orthodontics, D.A.Pandu Memorial R V Dental College, Bengaluru |
| 9. | Dr. Konaraddi J. B, Professor & HOD, Department of Rasashastra, Indian Institute of Ayurvedic Medicine & Research, Opp. Durga Jayamahal Road, Palace Compound, Bengaluru- 560 006 |
| 10. | Mr. Somashekarayya Kalmath, Associate Professor, KLE's Institute of Nursing Sciences, Vidyanagar, Hubli – 580 031 |
| 11. | Dr. Pandu, #449, 8$^{th}$ Main, ITI Layout, Mallathahalli Bangalore – 560 056 |
| 12. | Dr. Sridhar P V, Asso. Professor, Dept. of Pediatrics, Mandya Institute of Medical Sciences, Mandya. |

ಕುಲಸಚಿವರು ಕುಲಪತಿಗಳು

| | |
|---|---|
| 13. | Dr. Sharan J Shetty, A J Institute of Dental Sciences, Dept. of Oral Pathology, A J Campus, Kuntikana, Mangalore – 575 004. |
| 14. | Dr. Mahendra, Reader, Krishnadevaraya College of Dental Sciences, Via Yelahanka, Hunasamaranahalli, Bangalore - 562 157 |
| 15. | Dr. Deelip Natekar, Principal, BVVS Sajjalashree Institute of Nursing Sciences, Navanagar, Bagalkot |
| 16. | Dr. Chandrashekar Kuppi, Principal, Sharada Ayurvedic Medical College & Hospital, Hyderabad Road, Yadgir |
| 17. | Dr. Shivakumar Swamy, Principal, Mallige College of Pharmacy, 71, Silvepura, Chikkabanavara, Bengaluru |
| 18. | Director cum Dean, Shri Atal Bihari Vajpayee Medical College & Research Institute, Shivaji Nagar, Bengaluru |
| 19. | Dr. A. Lokesh, Finance Officer, RGUHS- Invitee |
| 20. | Sri. M.R.Ravi Kumar IAS, Registrar, RGUHS, Bengaluru |

**Members absent :**

| | |
|---|---|
| 1. | The Principal Secretary to Government, Health & Family Welfare Department, (Medical Education) Government of Karnataka, Room No. 611, Gate – 4, 6th Floor, M.S. Building, Dr. B.R. Ambedkar Veedhi, Bangalore –560 001. |
| 2. | The Secretary to Government, Dept. of Health & Family Welfare, M S Building, Dr. B.R. Ambedkar Veedhi, Bangalore –560 001. |
| 3. | The Director of Health & Family Welfare Services, Directorate, Health and Family Welfare Services, Arogya Soudha, 6th Floor, Magadi Road, Bengaluru – 560023 |
| 4. | The Director of Medical Education, Government of Karnataka, Ananda Rao Circle, Bangalore –560 009. |
| 5. | The Commissioner, Department of Ayurveda, yoga & Naturopathy, Unani, Siddha & Homoeopathy (AYUSH), Government of Karnataka, Dhanvanthri Road, Bangalore –560 009 |
| 6. | Shri. Aayanur Manjunath, "Manjula Nilaya", 2nd Cross, Mission Compound, Shivamogga |
| 7. | Dr. Y.Bharath Shetty, Member of Karnataka Legislative Assembly, No. 2-31/25, Flat No. 502, Abhiman Heights Haripadavu, Konchadi, Mangalore, Dakshina Kannada -575008 |
| 8. | Sri. S. Kumar Bangarappa, Member of Karnataka Legislative Assembly, Kubatur Grama, Kubatur Post, Sorabha Taluk, Shivamogga Dist. |
| 9. | Dr. K. Srinivasa Murthy, Member of Karnataka Legislative Assembly, No. 210, Obhalapura, Tyamagondlu Hobli, Nelamangala Tq, Bangalore Rural-562 132 |
| 10. | Dr. Jayathirth R Joshi, Prof & Head of Department, Department of Moulika Siddantha, Ayurveda Mahavidyalaya, Heggeri Ext. Hubballi |

ಕುಲಸಚಿವರು ಕುಲಪತಿಗಳು

| | |
|---|---|
| 11. | Dr. Roopesh Eklarkar, Principal & Head of Department Rasashastra and Baishajya Kalpana,Sri Siddharameshwar Ayurvedic Medical College & Research Centre, Bidar |
| 12. | Dr. Ravindra Banakar, Professor & Head, Department of Ophthalmology, JJM Medical College, Davangere – 577 004 |
| 13. | Dr. Mallikarjuna Swamy B, Professor & Head, Department of Orthopaedics, St. John"s Medical College, Bengaluru |
| 14. | Sri. R. S. Madarkhandi, Old No. 87, New No. 42, 21st Main, Pipeline Road, Kurubarahalli, Bengaluru- 560 086 |
| 15. | Shri. T. Dileep Kumar, Registered Nurse of Karnataka State Nursing Council, No.9, Vaibhavi Nilaya, 40th A Cross, 26th Main, Jayanagar, 9th Block, Bangalore – 560 009 |
| 16. | Dr. Narayan Murthy C, Principal, Basaveshwara College of Allied Health Sciences, Chitradurga |
| 17. | Aishwarya K.C, Principal, K.V.G Institute of Allied Health Sciences, Kurunjibag, Sullia, Dakshina Kannada. |

**Syndicate members present :**

| | |
|---|---|
| 1. | Dr. Kateel Suresh Kudva, President, IMA-KSB, Malya Nursing Home, # 266/2, "Änanta Shayana" Opp. Post Office, Karkala- 574 104, Udupi District |
| 2. | Dr. Gajanana Hegde, Dean & Director, Government Ayurveda Medical College, Mysuru |
| 3. | Dr. Manoj Kumar H.V, Dean & Director, Shri Atal Bihari Vajpayee Medical College & Research Institute, Bengaluru |
| 4. | Prof. S.Ramachandra Setty, Principal, Government College of Pharmacy, Bengaluru |
| 5. | Dr. P.S. Bhusaraddi, Director(I), & Professor & HOD, Department of Anatomy, Gadag Institute of Medical Sciences, Gadag |
| 6. | Dr. Nagesh N.S, Director, Institute of Gastroenterology Sciences and Organ Transplant, Bengaluru |
| 7. | Dr. M. R. Ravikumar, Eye Specialist, M.M Hospital, B.M Road, Kunigal |

**Members Absent :**

| | |
|---|---|
| 1. | The Principal Secretary to Government, Health & Family Welfare Department, Government of Karnataka, The Secretary to Government, Dept. of Health & Family Welfare, Vikasa Soudha, Bengaluru. |
| 2. | The Secretary to Government, Health & Family Welfare Department, (Medical Education) Government of Karnataka, Room No. 611, Gate – 4, 6th Floor, M.S. Building, Dr. B.R. Ambedkar Veedhi, Bengaluru –560 001. |

ಕುಲಸಚಿವರು ಕುಲಪತಿಗಳು

| | |
|---|---|
| 3. | The Director of Health & Family Welfare Services, Directorate, Health and Family Welfare Services Arogya Soudha, 6th Floor, Magadi Road, Bengaluru – 560 023 |
| 4. | The Director of Medical Education, Government of Karnataka, Ananda Rao ( Bengaluru - 560 009 |
| 5. | The Commissioner, Department of Ayurveda, Yoga & Naturopathy, Unani, Siddha & Homoeopathy (AYUSH), Government of Karnataka, Dhanvanthri Road, Bengaluru –560 009 |
| 6. | The President, Karnataka Medical Council, 16/6, Miller Tank Bed Road, Vasanth Nagar, Bengaluru, Karnataka 560 052 |
| 7. | Dr. K. Venkatagiri, Former Senate Member, RGUHS, 80ft Road, Near Bangalore University, Mallathahalli Bus Stop, Bengaluru- 56 |

ವಿಶ್ವವಿದ್ಯಾಲಯದ ಕುಲಸಚಿವರು ಗೌರವಾನ್ವಿತ ಕುಲಪತಿಗಳನ್ನು ಹಾಗೂ ಮಾನ್ಯ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರುಗಳನ್ನು ಸೆನೆಟ್ ಹಾಗೂ 169ನೇ ಸಿಂಡಿಕೇಟ್ ಜಂಟಿ ಸಭೆಗೆ ಸ್ವಾಗತಿಸಿದರು ಹಾಗೂ ಗೌರವಾನ್ವಿತ ಕುಲಪತಿಯವರಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ನಡವಳಿಗಳನ್ನು ನಡೆಸಲು ಕೋರಿದರು. ಗೌರವಾನ್ವಿತ ಕುಲಪತಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರುಗಳನ್ನು ಸೆನೆಟ್ ಹಾಗೂ 169ನೇ ಸಿಂಡಿಕೇಟ್ ಜಂಟಿ ಸಭೆಗೆ ಸ್ವಾಗತಿಸಿದರು. ತದನಂತರ ಕಾರ್ಯಸೂಚಿಯನ್ನು ಸಭೆಯ ಮುಂದೆ ಮಂಡಿಸಿದರು.

| | |
|---|---|
| 1. | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳ ಕುರಿತಾಗಿ ಚರ್ಚಿಸಲು. |
| ಚರ್ಚೆ | ಗೌರವಾನ್ವಿತ ಕುಲಪತಿಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳ ಕುರಿತಾಗಿ ಚರ್ಚಿಸಲು ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಜಂಟಿ ಸಭೆಯನ್ನು ಈ ದಿನ ಆಯೋಜಿಸಲಾಗಿದೆ ಎಂದು ತಿಳಿಸಿದರು.<br><br>ದಿನಾಂಕ 20.10.2021ರಂದು ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರು ತಮ್ಮ ಪತ್ರದಲ್ಲಿ 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಅಂತಿಮಗೊಳಿಸಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ |

ಕುಲಸಚಿವರು ಕುಲಪತಿಗಳು

ವಿಶ್ವವಿದ್ಯಾಲಯದ ಅಧಿನಿಯಮ 1994 ಕಲಂ 43 ಅಡಿಯಲ್ಲಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ತಿಳಿಸಿದರು.

ಈ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ವಿಶ್ವವಿದ್ಯಾಲಯದ ಸೆನೆಟ್ ಮತ್ತು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆದು ತದನಂತರ ಕರ್ನಾಟಕ ಸರ್ಕಾರದ ವಿಧಾನ ಮಂಡಲದ ಎರಡೂ ಸಭೆಗಳ ಮುಂದೆ ಮಂಡಿಸುವ ಅವಶ್ಯಕತೆ ಇರುತ್ತದೆ ಎಂದು ವಿವರಿಸಿದರು ಹಾಗೂ ಈ ಕುರಿತಾಗಿ ಈಗಾಗಲೇ ವರದಿಯನ್ನು ಸಲ್ಲಿಸುವಲ್ಲಿ ಸಾಕಷ್ಟು ವಿಳಂಬವಾಗಿದ್ದು ಈ ವಿಷಯವನ್ನು ಕಾಗದ ಸಮಿತಿಯು ಕೂಡ ಉಲ್ಲೇಖಿಸಿದ್ದು ಈ ಕಾರಣದಿಂದಾಗಿ ತುರ್ತಾಗಿ ಸೆನೆಟ್ ಹಾಗೂ ಸಿಂಡಿಕೇಟ್ ಜಂಟಿ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸಿ 2018-19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯ ವರದಿಯನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆ ಕೋರಿದರು.

ಕುಲಸಚಿವರು ಈ ವಿಷಯದ ಕುರಿತಾಗಿ ವಿವರಿಸುತ್ತಾ ಸದರಿ ವಿಷಯ ಅತ್ಯಂತ ಗಂಭೀರವಾದ ವಿಷಯವಾಗಿದ್ದು ದಿನಾಂಕ 20.10.2021ರಂದು ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರು ವರದಿಯನ್ನು ಸಲ್ಲಿಸಿದ್ದು ಆ ದಿನದಿಂದ ಇಲ್ಲಿಯವರೆಗೂ ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸದೆ ಕರ್ತವ್ಯಲೋಪ ಎಸಗಿರುವ ವಿಶ್ವವಿದ್ಯಾಲಯದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಅವಶ್ಯಕತೆಯಿದೆ ಎಂದು ಸಭೆಯಲ್ಲಿ ತಿಳಿಸಿದರು.

ಗೌರವಾನ್ವಿತ ಕುಲಪತಿಗಳು ಈ ಕುರಿತಾಗಿ ವಿವರಿಸುತ್ತಾ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಆಡಳಿತಾತ್ಮಕವಾಗಿ ಕೆಲಸವನ್ನು ಅನುಷ್ಠಾನಗೊಳಿಸುವಲ್ಲಿ ತುಸು ವಿಳಂಬವಾಗಿರುವುದಾಗಿ ಸಭೆಯಲ್ಲಿ ತಿಳಿಸಿ 2018-19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಒಟ್ಟು 73 ಕಂಡಿಕೆಗಳಿದ್ದು ಪ್ರತಿ ಕಂಡಿಕೆಗಳಲ್ಲಿ ಆಕ್ಷೇಪಿತ ಹಾಗೂ ವಸೂಲಾತಿ ಕುರಿತಾಗಿ ವರದಿಯನ್ನು ಸಲ್ಲಿಸಿದ್ದು ಈ ವರದಿಗಳಿಗೆ ಕಂಡಿಕಾವಾರು ಉತ್ತರಗಳನ್ನು ತಯಾರಿಸಿ ಸಿಂಡಿಕೇಟ್ ಹಾಗೂ ಸೆನೆಟ್ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದು ಪೂರಕ

ಕುಲಸಚಿವರು ಕುಲಪತಿಗಳು

ದಾಖಲೆಗಳೊಂದಿಗೆ ಅನುಸರಣಾ ವರದಿಯನ್ನು ಕಂಡಿಕೆಗಳ ತೀರುವಳಿಗಾಗಿ ಸಲ್ಲಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು ಹಾಗೂ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯವರಿಗೆ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಕುರಿತಾಗಿ ಕಂಡಿಕಾವಾರು ಸಭೆಯಲ್ಲಿ ವಿವರಿಸಲು ತಿಳಿಸಿದರು.

ಹಣಕಾಸು ಅಧಿಕಾರಿಯವರು ವಿಶ್ವವಿದ್ಯಾಲಯದ ನಿಯಮ 43ರನ್ವಯ ಆಯಾ ವರ್ಷದ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳನ್ನು ಏಪ್ರಿಲ್ ಅಂತ್ಯದೊಳಗೆ ಸಿದ್ಧಪಡಿಸಬೇಕು ವಾರ್ಷಿಕ ಲೆಕ್ಕಪರಿಶೋಧನೆಯನ್ನು ಜೂನ್ ಅಂತ್ಯದೊಳಗೆ ಕೈಗೊಂಡು ಸೆಪ್ಟೆಂಬರ್ 30ರ ಒಳಗಾಗಿ ವಿಧಾನ ಮಂಡಲದ ಎರಡು ಸಭೆಗಳ ಮುಂದೆ ಮುದ್ರಿತ ಎರಡು ವರದಿಗಳನ್ನು ಮಂಡಿಸುವುದು ಶಾಸನಬದ್ಧವಾದ ಸಂಪ್ರದಾಯವಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಆದರೆ 2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಡಿಸೆಂಬರ್ –2019ರಿಂದ ಪ್ರಾರಂಭಿಸಿ ನವೆಂಬರ್ –2021ಕ್ಕೆ ಲೆಕ್ಕಪರಿಶೋಧಕರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು, 2 ವರ್ಷ ವಿಳಂಬವಾಗಿರುತ್ತದೆ. ಕೊರೋನಾ ಮಹಾಮಾರಿ ಸೇರಿದಂತೆ ಇತರೆ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುವುದಾಗಿ ತಿಳಿಸಿರುತ್ತಾರೆ.

**ಕ್ರಮ: ಹಣಕಾಸು ಅಧಿಕಾರಿಗಳು ಹಾಗೂ ಉಪನಿರ್ದೇಶಕರು (ಸಿಬ್ಬಂದಿ)**

ಕಂಡಿಕೆ 11(iii) ಬಗ್ಗೆ ಹಣಕಾಸು ಅಧಿಕಾರಿಗಳು ವಿವರವಾಗಿ ಸಭೆಯ ಗಮನಕ್ಕೆ ಈ ಕೆಳಕಂಡಂತೆ ಮಂಡಿಸಿದರು.

2012–13ನೇ ಸಾಲಿನವರೆಗೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆ ಮುಂದೆ ಯಾವುದೇ ತಕರಾರು ಇರುವುದಿಲ್ಲ. ಆದರೆ 2013–14, 2014–15 ಮತ್ತು 2015–16ನೇ ಸಾಲಿನಲ್ಲಿ ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ವಿಶ್ವವಿದ್ಯಾಲಯದ ಆದಾಯವನ್ನು ಲೆಕ್ಕ ಹಾಕಲಾಗಿರುತ್ತದೆ.

| | Assessment u/s | Assessment order date | Income assessed | Tax demand incl. interest | Tax deposited | TDS credit given | Total Tax deposited |
|---|---|---|---|---|---|---|---|
| | 143(3) | 16.11.2016 | 1,02,47,09,095 | 45,57,02,413 | 8,66,55,361 | 60,14,502 | 9,26,69,863 |

ಕುಲಸಚಿವರು

ಕುಲಪತಿಗಳು

| | | | | | | | |
|---|---|---|---|---|---|---|---|
| | 143(3) | 25.07.2017& Rectification order 03.09.2018 | 64,95,30,466 | 30,98,88,602 | 5,67,45,926 | 2,64,39,737 | 8,31,85,663 |
| | 143(3) | 7.5.2018 | 88,52,78,852 | 35,62,31,919 | 6,02,00,000 | 5,53,15,642 | 11,55,15,642 |
| | | | | Total | **20,36,01,287** | **8,77,69,881** | **29,13,71,168** |

| | |
|---|---|
| | ಆದಾಯ ತೆರಿಗೆ ಇಲಾಖೆಯು ವಿಶ್ವವಿದ್ಯಾಲಯದ ಆದಾಯವನ್ನು ಲೆಕ್ಕಮಾಡಿ ಆದಾಯ ತೆರಿಗೆ ಪಾವತಿಸುವಂತೆ ತಿಳಿಸಿರುವುದರಿಂದ ನಿಯಮಗಳಂತೆ 12'A' ಅಡಿಯಲ್ಲಿ ವಿನಾಯ್ತಿ ಇದ್ದಾಗ್ಯೂ ಆದಾಯ ತೆರಿಗೆ ಇಲಾಖೆಯಲ್ಲಿ ಅಪೀಲು ಸಲ್ಲಿಸಲು ಶೇ 20% ಠೇವಣಿ ಮಾಡಿದ ನಂತರ ಅಪೀಲು ಸಲ್ಲಿಸಬೇಕಾಗಿರುವುದರಿಂದ ರೂ. 20.36 ಕೋಟಿ ನಗದು ಮತ್ತು 8.77 ಕೋಟಿ (ಟಿಡಿಎಸ್ ನಿಂದ ಬಂದ ಜಮೆ ಹಣ) ಸೇರಿ ರೂ. 29.13 ಕೋಟಿಗಳನ್ನು ಬಾಕಿ ಇರುವ ಅಪೀಲುಗಳು ಇತ್ಯರ್ಥವಾಗುವವರೆಗೂ ಸದರಿ ಠೇವಣಿಯು ಆದಾಯ ತೆರಿಗೆ ಇಲಾಖೆಯ ವಶದಲ್ಲಿರುತ್ತದೆ. ಸದರಿ ಅಪೀಲುಗಳಲ್ಲಿ ವಿಶ್ವವಿದ್ಯಾಲಯವು ಯಶಸ್ವಿಯಾದ ನಂತರ ಶೇ. 6% ರಂತೆ ಬಡ್ಡಿ ಲೆಕ್ಕ ಹಾಕಿ ಹಿಂತಿರುಗಿಸಲಾಗುವುದಾಗಿ ಹಾಗೂ 2009–10ನೇ ಸಾಲಿನಿಂದ 2018–19ನೇ ಸಾಲಿನವರೆಗೆ ಠೇವಣಿಯ ಮೇಲಿನ ಬಡ್ಡಿಯಲ್ಲಿ ಟಿ.ಡಿ.ಎಸ್ ಮಾಡಿರುವ ರೂ. 21.99 ಕೋಟಿಗಳನ್ನು ನಿಯಮ 12 (ಎ) ವಿನಾಯ್ತಿ ಪ್ರಕಾರ ಆದಾಯ ತೆರಿಗೆ ಇಲಾಖೆಯಿಂದ ಹಿಂಪಡೆಯಲು ವಿಶ್ವವಿದ್ಯಾಲಯದ ಚಾರ್ಟರ್ಡ್ ಅಕೌಂಟೆಂಟ್‌ರವರಾದ ಶ್ರೀ ಸುದರ್ಶನ್ (ಮೆ॥ ಸುದರ್ಶನ್ ಅಂಡ್ ಕಂ) ರವರ ಮೂಲಕ ಕ್ರಮ ವಹಿಸುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು. (ವಿವರಣೆಗಳನ್ನು ಕೆಳಗಿನ ಪಟ್ಟಿಯಲ್ಲಿ ತಿಳಿಸಲಾಗಿದೆ) |

| FY (AY) | TDS at credit | Remarks |
|---|---|---|
| 2009-10 (2010-11) | 166971 | As per 26AS and claimed in the RoI |
| 2010-11 (2011-12) | 593130 | |
| 2011-12 (2012-13) | 1121339 | |
| 2012-13 (2013-14) | 28703 | TDS credit was Rs.6043205/- but credit by the ITD restricted to Rs.6014502/- and balance Rs.28703/- shown as receivable |

ಕುಲಸಚಿವರು　　　　　　　　ಕುಲಪತಿಗಳು

| | | |
|---|---|---|
| 2014-15 (2015-16) | 4080103 | TDS credit wasRs.59536206/- but credit by the ITD restricted to Rs.55315642/- and balance Rs.4080103/- shown as receivable. |
| 2015-16 (2016-17) | 47196143 | As per 26AS and claimed in the RoI |
| 2016-17 (2017-18) | 52224545 | |
| 2017-18 (2018-19) | 56606919 | |
| 2018-19 (2019-20) | 57924415 | |
| **Total** | **219942268** | |

| | |
|---|---|
| | ಕಂಡಿಕೆ 21ರಲ್ಲಿ ತಿಳಿಸಿರುವಂತೆ ಹೊರಗುತ್ತಿಗೆ ಆಧಾರದ ಮೇಲೆ ವಿಶ್ವವಿದ್ಯಾಲಯಕ್ಕೆ ಅಗತ್ಯ ಸಿಬ್ಬಂದಿಗಳ ಸೇವೆ ಪಡೆಯುವ ಕಾರ್ಯದಲ್ಲಿ ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆಯಾಗಿರುವುದಾಗಿ ಮಾನ್ಯ ಸದಸ್ಯರಾದ ಡಾ॥ ನಾಗೇಶ್ ರವರು ಸೇರಿದಂತೆ ಹೆಚ್ಚಿನ ಸದಸ್ಯರು ಆಕ್ಷೇಪಣೆ ವ್ಯಕ್ತಪಡಿಸಿ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಸೂಚಿಸಿದರು.<br><br>**ಕ್ರಮ: ಉಪನಿರ್ದೇಶಕರು (ಸಿಬ್ಬಂದಿ) ಮತ್ತು (ಸಂಗ್ರಹಣೆ)**<br><br>ಕಂಡಿಕೆ 22ರಲ್ಲಿ ತಿಳಿಸಿರುವಂತೆ ಮೆ॥ ಹೈಟೆಕ್ ಪ್ರಿಂಟ್ ಸಿಸ್ಟಮ್ ಲಿಮಿಟೆಡ್ ಸಂಸ್ಥೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಮೊತ್ತವನ್ನು ಕೈ ಬಿಡುವಂತೆ ಸೂಕ್ತ ಉತ್ತರವನ್ನು ಲೆಕ್ಕಪರಿಶೋಧಕರಿಗೆ ಸಲ್ಲಿಸಲಾಗಿತ್ತದೆ ಹಾಗೂ ರೂ. 1,73,274/–ಗಳ ವಸೂಲಿ ಮೊತ್ತವನ್ನು ವಸೂಲಿ ಮಾಡಿರುವುದಾಗಿ ಹಣಕಾಸು ಅಧಿಕಾರಿಗಳು ಸಭೆಯ ಗಮನಕ್ಕೆ ತಂದಿರುತ್ತಾರೆ. |

ಕುಲಸಚಿವರು ಕುಲಪತಿಗಳು

| | |
|---|---|
| | ಕಂಡಿಕೆ 23, 24, 25, 26, 27, 28 ಮತ್ತು 31ಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ವಿಭಾಗದವರು ನೀಡಿರುವ ಉತ್ತರಗಳನ್ನು ಪರಿಶೀಲಿಸಿ ಈಗಾಗಲೇ ಲೆಕ್ಕಪರಿಶೋಧಕರಿಗೆ ಸಲ್ಲಿಸಲಾಗಿರುತ್ತದೆ. ಸದರಿ ಕಂಡಿಕೆಗಳ ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರು ಪರಿಶೀಲಿಸಿ ತೀರುವಳಿ ಪತ್ರವನ್ನು ನೀಡಬೇಕಾಗಿರುತ್ತದೆಂದು ಹಣಕಾಸು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.<br><br>ಕಂಡಿಕೆ 29 ಮತ್ತು 30ಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ವಿಭಾಗಗಳಿಂದ ಇಲ್ಲಿಯವರೆಗೂ ಸೂಕ್ತ ಉತ್ತರಗಳನ್ನು ಸಲ್ಲಿಸಿರುವುದಿಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಉತ್ತರಗಳನ್ನು ಪಡೆದು ಪರಿಶೀಲಿಸಿ ಲೆಕ್ಕಪರಿಶೋಧಕರಿಗೆ ಕಳುಹಿಸಿ ಸದರಿ ಕಂಡಿಕೆಗಳಿಗೆ ಆಕ್ಷೇಪಣೆ ಮತ್ತು ವಸೂಲಾತಿಯಿಂದ ಕೈಬಿಡಿಸಿಕೊಳ್ಳುವುದಾಗಿ ಹಣಕಾಸು ಅಧಿಕಾರಿಗಳು ಸಭೆಗೆ ತಿಳಿಸಿದರು.<br><br>ಕಂಡಿಕೆ 32ರಲ್ಲಿ ಸೂಚಿಸಿರುವ ರೂ. 7,050/- ಎಲ್.ಐ.ಸಿ ಪರೀಕ್ಷಣಾ ಸಂಬಂಧದ ಸಂಭಾವನೆಯನ್ನು ಮುಂದಿನ ದಿನಗಳಲ್ಲಿ ಸಂಬಂಧಪಟ್ಟವರಿಂದ ವಸೂಲಿ ಮಾಡಿ ಲೆಕ್ಕಪರಿಶೋಧಕರಿಗೆ ತಿಳಿಸುವುದಾಗಿ ಸಭೆಯ ಗಮನಕ್ಕೆ ತರಲಾಯಿತು.<br>**ಕ್ರಮ: ಹಣಕಾಸು ಅಧಿಕಾರಿಗಳು**<br><br>ಕಂಡಿಕೆ 33ರಲ್ಲಿ ಸೂಚಿಸಿರುವಂತೆ ಮುಂದಿನ ದಿನಗಳಲ್ಲಿ ಬ್ಯಾಂಕಿನ ವ್ಯವಸ್ಥಾಪಕರೊಂದಿಗೆ ಸಮಾಲೋಚಿಸಿ ಅನಾವಶ್ಯಕವಾಗಿ ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಯಾವುದೇ ರೀತಿಯ ಶುಲ್ಕಗಳನ್ನು ವಿಧಿಸದಂತೆ ಕ್ರಮವಹಿಸುವುದಾಗಿ ಸಭೆಯ ಗಮನಕ್ಕೆ ತರಲಾಯಿತು.<br>**ಕ್ರಮ: ಹಣಕಾಸು ಅಧಿಕಾರಿಗಳು**<br><br>ಕಂಡಿಕೆ 34ರಲ್ಲಿ ತಿಳಿಸಿರುವ ವಿಷಯ ಗಂಭೀರ ಸ್ವರೂಪದ್ದಾಗಿದ್ದು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಇನ್ನು ಮುಂದೆ ಆದಾಯ ತೆರಿಗೆ ಸೇರಿದಂತೆ ಸಿಬ್ಬಂದಿ ಮತ್ತು ಅಧಿಕಾರಿಗಳ ವೇತನಗಳಿಂದ ಕಡಿತಗೊಳಿಸುವ ಹಣವನ್ನು ಆದಾಯ ತೆರಿಗೆ ಇಲಾಖೆ ಸೇರಿದಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ನಿಗದಿತ ಅವಧಿಯೊಳಗೆ ಪಾವತಿಸುವುದು ವಿಶ್ವವಿದ್ಯಾಲಯದ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಮುಂದಿನ ದಿನಗಳಲ್ಲಿ ಇಂತಹ ಕರ್ತವ್ಯ ಲೋಪವಾಗದಂತೆ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ಸದಸ್ಯರು ಸೂಚಿಸಿದರು.<br>**ಕ್ರಮ: ಉಪ ನಿರ್ದೇಶಕರು (ಸಿಬ್ಬಂದಿ)** |

ಕುಲಸಚಿವರು ಕುಲಪತಿಗಳು

| | |
|---|---|
| | ಕಂಡಿಕೆ 35, 37, 40, 41, 42, 43, 44, 45, 46, 49, 50, 51, 54, 56, 58, 59, 60, 61, 62, 63, 64, 65, 66, 67, 68, 69, 76, 78, 83, 86ರಲ್ಲಿ ಬರುವ ಆಕ್ಷೇಪಣೆಗಳಿಗೆ ಹಾಗೂ ವಸೂಲಾತಿಗೆ ಸಂಬಂಧಿಸಿದಂತೆ ಈಗಾಗಲೇ ಸೂಕ್ತ ಉತ್ತರಗಳನ್ನು ಸಂಬಂಧಪಟ್ಟ ಶಾಖೆಯ ಮುಖ್ಯಸ್ಥರಿಂದ ಪಡೆದು, ಪರಿಶೀಲಿಸಿ ಲೆಕ್ಕಪರಿಶೋಧಕರಿಗೆ ಮುಂದಿನ ಕ್ರಮಕ್ಕಾಗಿ ಮತ್ತು ತೀರುವಳಿ ಪತ್ರ ನೀಡುವಂತೆ ಕೋರಿಕೆ ಸಲ್ಲಿಸಿರುವುದಾಗಿ ಸಭೆಯ ಗಮನಕ್ಕೆ ತರಲಾಯಿತು.<br><br>ಕಂಡಿಕೆ 39ರಲ್ಲಿ ಪ್ರಸ್ತಾಪಿಸಿರುವ ವಿಷಯವೂ ಗಂಭೀರ ಸ್ವರೂಪದಾಗಿದ್ದು. ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಿಂದ ಪ್ರವೇಶಾತಿ ಮತ್ತು ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದ ರೂ. 70.02 ಲಕ್ಷ ಶುಲ್ಕವಾಗಿರುತ್ತದೆ. ಸದರಿ ಬಾಕಿ ವಸೂಲಿ ಮಾಡುವುದು ಸಂಬಂಧಪಟ್ಟ ಉಪಕುಲಸಚಿವರುಗಳ ಕರ್ತವ್ಯವಾಗಿದ್ದು ಸದರಿ ಮೊತ್ತವನ್ನು ಒಂದು ತಿಂಗಳಲ್ಲಿ ವಸೂಲಿ ಮಾಡಿ ವರದಿ ನೀಡುವಂತೆ ದಿನಾಂಕ 25.04.2022ರಂದು ಸೂಚನೆ ನೀಡಲಾಗಿರುತ್ತದೆ. ಈ ಬಗ್ಗೆ ವಸೂಲಾತಿ ವಿವರಗಳನ್ನು ಸಂಬಂಧಪಟ್ಟವರಿಂದ ಪಡೆದು ಈ ಕಂಡಿಕೆಯನ್ನು ವಸೂಲಾತಿಯಿಂದ ಕೈಬಿಡುವಂತೆ ಲೆಕ್ಕಪರಿಶೋಧಕರನ್ನು ಕೋರುವುದಾಗಿ ಸಭೆಯ ಗಮನಕ್ಕೆ ತರಲಾಯಿತು.<br>**ಕ್ರಮ: ಉಪಕುಲಸಚಿವರು (ಪ್ರವೇಶಾತಿ ಮತ್ತು ಪರೀಕ್ಷಾ ವಿಭಾಗ)**<br><br>ಕಂಡಿಕೆ 36, 47, 48, 52, 53, 55, 57 (ಎ)ಯಿಂದ 57(ಎಫ್), 70, 81ಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಶಾಖೆಗಳ ಮುಖ್ಯಸ್ಥರಿಂದ ಸೂಕ್ತ ಉತ್ತರ, ದಾಖಲೆಗಳು, ಕಡತಗಳು ಇತ್ಯಾದಿ ವಿವರಗಳನ್ನು ಪಡೆದು ಅಗತ್ಯವಾದಲ್ಲಿ ಎಲ್ಲಾ ವಿಭಾಗಾಧಿಕಾರಿಗಳ ಸಭೆಯನ್ನು ತುರ್ತಾಗಿ ಕರೆದು ಕೂಡಲೇ ಬಾಕಿ ಇರುವ ಸದರಿ ಕಂಡಿಕೆಗಳಿಗೆ ಸಮಂಜಸವಾದ ಉತ್ತರಗಳನ್ನು ಲೆಕ್ಕಪರಿಶೋಧಕರಿಗೆ ಸಲ್ಲಿಸಿ, ತೀರುವಳಿ ಪತ್ರ ಪಡೆಯಲು ಕ್ರಮವಹಿಸಲು ಸಂಬಂಧಪಟ್ಟ ಎಲ್ಲಾ ವಿಭಾಗದ ಮುಖ್ಯಸ್ಥರಿಗೆ ತಿಳಿಸುವುದಾಗಿ ಗೌರವಾನ್ವಿತ ಕುಲಪತಿಯವರು ಸಭೆಯ ಗಮನಕ್ಕೆ ತಂದರು.<br>**ಕ್ರಮ: ಹಣಕಾಸು ಅಧಿಕಾರಿಗಳು ಮತ್ತು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು)**<br><br>ಒಟ್ಟಾರೆಯಾಗಿ 2018-19ನೇ ಸಾಲಿನ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ. 73 ಕಂಡಿಕೆಗಳ ಪೈಕಿ 45 ಕಂಡಿಕೆಗಳಿಗೆ ಉತ್ತರ |

ಕುಲಸಚಿವರು ಕುಲಪತಿಗಳು

| | |
|---|---|
| | ನೀಡಲಾಗಿದೆ. ಉಳಿದ 28 ಕಂಡಿಕೆಗಳಿಗೆ ಜರೂರಾಗಿ ಉತ್ತರ ನೀಡಲು ಕ್ರಮ ತೆಗೆದುಕೊಳ್ಳಲು ಸೂಚಿಸುವುದಾಗಿ ಮಾನ್ಯ ಕುಲಸಚಿವರು ಸಭೆಯ ಗಮನಕ್ಕೆ ತಂದರು. |

| **ವರದಿ ಪ್ರಕಾರ** | | **ಉತ್ತರ ನೀಡಿರುವುದು** | | **ಬಾಕಿ ವಿವರಗಳು** | |
|---|---|---|---|---|---|
| **ಆಕ್ಷೇಪಣೆ ಮೊತ್ತ** | **ವಸೂಲಿ ಮೊತ್ತ** | **ಆಕ್ಷೇಪಣೆ ಮೊತ್ತ** | **ವಸೂಲಿ ಮೊತ್ತ** | **ಆಕ್ಷೇಪಣೆ ಮೊತ್ತ** | **ವಸೂಲಿ ಮೊತ್ತ** |
| ರೂ. 945.21 ಕೋಟಿ | ರೂ. 1.34 ಕೋಟಿ | ರೂ. 855.52 ಕೋಟಿ | ರೂ. 51.78 ಲಕ್ಷ | ರೂ. 89.68 ಕೋಟಿ | ರೂ. 82.22 ಲಕ್ಷ |

| | |
|---|---|
| | ಮಾನ್ಯ ಸದಸ್ಯರುಗಳು ಮಾತನಾಡಿ ಲೆಕ್ಕಪರಿಶೋಧನೆಯಲ್ಲಿ ಕೆಲವು ಕಂಡಿಕೆಗಳು ವಿಶ್ವವಿದ್ಯಾಲಯದ ಹಣಕಾಸಿಗೆ ಸಂಬಂಧಿಸಿರುತ್ತವೆ. ಕೆಲವು ಕಂಡಿಕೆಗಳಲ್ಲಿ ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆಯಾಗಿರುತ್ತದೆ ಹಾಗೂ ಸಿಂಡಿಕೇಟ್ ಸಭೆಯ ಗಮನಕ್ಕೆ ತಂದಿರದ ಪ್ರಕರಣಗಳಿರುತ್ತವೆಂದು ಸಭೆಯ ಗಮನವನ್ನು ಸೆಳೆದು ಅಂತಹ ಗುರುತರ ಪ್ರಕರಣಗಳಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲು ಮಾಡಲು ಸೂಚಿಸಿದರು.<br><br>ಈ ಬಗ್ಗೆ ಮಾನ್ಯ ಕುಲಸಚಿವರು ಮಾತನಾಡಿ, ಏಕಾಏಕಿ ಕ್ರಿಮಿನಲ್ ಕೇಸ್ ದಾಖಲು ಮಾಡಲು ಬರುವುದಿಲ್ಲ ಆದರೆ ಅಂತಹ ಪ್ರಕರಣಗಳಲ್ಲಿ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದಾಗಿ ಸಭೆಯ ಗಮನಕ್ಕೆ ತಂದರು.<br><br>ಗೌರವಾನ್ವಿತ ಕುಲಪತಿಯವರು ಮಾತನಾಡಿ ವಿಶ್ವವಿದ್ಯಾಲಯದ ಆಡಳಿತ ನಡೆಸುವಾಗ ಕೆಲವೊಂದು ಅನಿವಾರ್ಯ ಸಂಧರ್ಬಗಳಲ್ಲಿ ಸಣ್ಣಮಟ್ಟ ಲೋಪದೋಷ ಗಳಾಗುವುದು ಸಹಜ. ಆದರೆ ಉದ್ದೇಶಪೂರ್ವಕವಾಗಿ ಮಾಡುವ ತಪ್ಪುಗಳನ್ನು ಕ್ಷಮಿಸಲಾಗುವುದಿಲ್ಲ. ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಗೆದುಕೊಂಡಿರುವ ನಿರ್ಧಾರಗಳಲ್ಲಿ ಆಗುವ ನ್ಯೂನತೆಗಳನ್ನು ನಿಯಮಗಳಡಿಯಲ್ಲಿ ಸರಿಪಡಿಸಿಕೊಳ್ಳಲಾಗುವುದು. ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಮ್ಮ ತಮ್ಮ ಕೆಲಸಗಳನ್ನು ಶ್ರದ್ಧೆ ಮತ್ತು ನಿಷ್ಠೆಯಿಂದ ನಿಯಮಗಳ ಪ್ರಕಾರ ನಿರ್ವಹಿಸುವಂತೆ ಎಲ್ಲರಿಗೂ ಸೂಚಿಸುವುದಾಗಿ ಮತ್ತೊಮ್ಮೆ ಸಭೆಯ ಗಮನಕ್ಕೆ ತಂದರು. |

ಕುಲಸಚಿವರು ಕುಲಪತಿಗಳು

| | |
|---|---|
| ನಿರ್ಣಯ | ಸುದೀರ್ಘ ಚರ್ಚೆಯ ನಂತರ ಎಲ್ಲಾ ಸದಸ್ಯರು ಒಮ್ಮತದಿಂದ ಲೆಕ್ಕಪರಿಶೋಧಕರು ಸಲ್ಲಿಸಿರುವ 2018-19ನೇ ಸಾಲಿನ ಲೆಕ್ಕಪರಿಶೋಧನೆ ವರದಿ ಮತ್ತು 2018-19, 2019-20 ಹಾಗೂ 2020-21ನೇ ಸಾಲಿನ ವಾರ್ಷಿಕ ವರದಿಗಳನ್ನು ಮುದ್ರಿಸಿ ವಿಧಾನ ಮಂಡಲದ ಎರಡು ಸಭೆಯ ಮುಂದೆ ಮಂಡಿಸಲು ಕೂಡಲೇ ಕ್ರಮ ವಹಿಸುವಂತೆ ಸೂಚಿಸಿ ಒಪ್ಪಿಗೆ ನೀಡಿದರು. |

ಸಭೆಯಲ್ಲಿ ಮೇಲ್ಕಂಡ ವಿಷಯವನ್ನು ಸಮಗ್ರವಾಗಿ ಚರ್ಚಿಸಿ ತೀರ್ಮಾನವನ್ನು ತೆಗೆದುಕೊಂಡ ನಂತರ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವರು** **ಕುಲಪತಿಗಳು**

**ಗೆ**

ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರುಗಳು/ ಪದನಿಮಿತ್ತ ಸದಸ್ಯರು.

**ಪ್ರತಿಗಳು : -**

1. ಘನತೆವೆತ್ತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು
2. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಧಾನಸೌಧ, ಬೆಂಗಳೂರು
3. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಆಪ್ತ ಸಹಾಯಕರುಗಳು, ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ/ ಹಣಕಾಸು ಅಧಿಕಾರಿಗಳು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ, ಬೆಂಗಳೂರು.
6. ಕಛೇರಿ ಪ್ರತಿ.

**ಕುಲಸಚಿವರು** **ಕುಲಪತಿಗಳು**